# ಉತ್ತರ ಕನ್ನಡ ಜಿಲ್ಲಾ ಸಹಕಾರ ಯೂನಿಯನ್ ನಿ., ಕುಮಟಾ.

ಕೆ.ಡಿ.ಸಿ.ಸಿ ಬ್ಯಾಂಕ್ ಕಟ್ಟಡ , ಪ್ರಧಾನ ಅಂಚೆ ಕಛೇರಿ ರಸ್ತೆ, ಕುಮಟಾ-581343

# Uttara Kannada District Co-operative Union Kumta

K.D.C.C Bank Building, Head Post Office Road, Kumta-581343

ದೂರವಾಣಿ: (08386) 222168 Email:nkdukmt@gmail.com


---

ಸಂಖ್ಯೆ:ಜಿ.ಸ.ಯೂ/22/ 02 /2026-2027, ದಿನಾಂಕ: 20-08-2026

## ಸುತ್ತೋಲೆ

ರಿಗೆ,
ಉತ್ತರ ಕನ್ನಡ ಜಿಲ್ಲೆಯ ಎಲ್ಲಾ
ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು .

ವಿಷಯ : ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ -ವಿದ್ಯಾರ್ಥಿನಿಯರಿಗೆ ದಿನಾಂಕ: 09-09-2026 ರಂದು ಚರ್ಚಾ ಸ್ಪರ್ಧೆಯನ್ನು ಏರ್ಪಡಿಸುವುದರ ಕುರಿತು.

ಉಲ್ಲೇಖ: ಕ.ರಾ.ಸ.ಮ.ಮಂ.ಪತ್ರ ಸಂಖ್ಯೆ/ಸಶಿವಿ/ 94/125/2026-2027, ದಿನಾಂಕ:20.07.2026

ಮಾನ್ಯರೇ,

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಸಹಕಾರ ಚಳುವಳಿಯ ಪ್ರಗತಿಯ ಕುರಿತಂತೆ ಜನ ಸಾಮಾನ್ಯರಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದು ಅವಶ್ಯವಾಗಿದ್ದು ಈ ದಿಶೆಯಲ್ಲಿ ಜಿಲ್ಲೆಯ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ- ವಿದ್ಯಾರ್ಥಿನಿಯರಿಗಾಗಿ ಸಹಕಾರ ವಿಷಯ ಕುರಿತು ಚರ್ಚಾ ಸ್ಪರ್ಧೆಯನ್ನು ದಿನಾಂಕ: 09-09-2026 ರಂದು ಬುಧವಾರ ಬೆಳಿಗ್ಗೆ 11-00 ಗಂಟೆಗೆ ಡಾ. ಎ.ವಿ. ಬಾಳಿಗಾ ಕಲಾ ಮತ್ತು ವಿಜ್ಞಾನ ಕಾಲೇಜು ಕುಮಟಾದಲ್ಲಿ ಏರ್ಪಡಿಸಲಾಗಿದೆ.

ಜಿಲ್ಲಾ ಮಟ್ಟದ ಈ ಚರ್ಚಾ ಸ್ಪರ್ದೆಯಲ್ಲಿ ಭಾಗವಹಿಸುವ ಅಭ್ಯರ್ಥಿಗಳು ಒಬ್ಬರು ವಿಷಯದ ಪರವಾಗಿ ಇನ್ನೊಬ್ಬರು ವಿಷಯದ ವಿರೋಧವಾಗಿ ಮಾತನಾಡಬೇಕಾಗುವುದು. ಈ ಚರ್ಚಾ ಸ್ಪರ್ಧೆಯಲ್ಲಿ ಅತ್ಯಧಿಕ ಅಂಕಗಳನ್ನು ಪಡೆದ ಇಬ್ಬರು (ಒಬ್ಬರು ವಿಷಯದ ಪರವಾಗಿ ಇನ್ನೊಬ್ಬರು ವಿಷಯದ ವಿರೋಧವಾಗಿ) ವಿಜೇತ ಅಭ್ಯರ್ಥಿಗಳಿಗೆ ಪ್ರಶಸ್ತಿ ಫಲಕ ನೀಡಿ ಗೌರವಿಸಲಾಗುವುದು ಹಾಗೂ ಸದರಿ ವಿದ್ಯಾರ್ಥಿಗಳನ್ನು ಬೆಂಗಳೂರಿನಲ್ಲಿ ನಡೆಯಲ್ಲಿರುವ ರಾಜ್ಯ ಮಟ್ಟದ ಚರ್ಚಾ ಸ್ಪರ್ದೆಯಲ್ಲಿ ಭಾಗವಹಿಸಲು ಕಳುಹಿಸಿಕೊಡಲಾಗುವುದು. ರಾಜ್ಯ ಮಟ್ಟದ ಚರ್ಚಾ ಸ್ಪರ್ಧೆಯು ನಡೆಯುವ ದಿನಾಂಕ, ವೇಳೆ, ಇತ್ಯಾದಿಗಳನ್ನು ನಂತರದಲ್ಲಿ ತಿಳಿಸಲಾಗುವುದು.

ವಿಷಯ: " ಭಾರತದಲ್ಲಿ ಸಹಕಾರ ಬ್ಯಾಂಕುಗಳು ಖಾಸಗಿ, ಸಾರ್ವಜನಿಕ ಮತ್ತು ವಾಣಿಜ್ಯ ಬ್ಯಾಂಕುಗಳಷ್ಟೆ ಭದ್ರತೆ ಮತ್ತು ದಕ್ಷತೆಯನ್ನು ಸಾಧಿಸಿವೆ.

**" In India, cooperative banks have achieved the same level of security and efficiency as private public, and commercial banks"**

ಜಿಲ್ಲಾ ಮಟ್ಟದ ಈ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿ- ವಿದ್ಯಾರ್ಥಿನಿಯರಿಗಾಗಿ ಅವರ ವಾಸಸ್ಥಳದಿಂದ ಕುಮಟಾಕ್ಕೆ ಬಂದು ಹೋಗುವ ಬಸ್ ದರವನ್ನು ಉತ್ತರ ಕನ್ನಡ ಜಿಲ್ಲಾ ಸಹಕಾರ ಯೂನಿಯನ್‌ನಿಂದ ಹಾಗೂ ರಾಜ್ಯ ಮಟ್ಟದ ಚರ್ಚಾ ಸ್ಪರ್ದೆಯಲ್ಲಿ ಭಾಗವಹಿಸಲು ಹೋಗಿ ಬರಲು ತಗಲುವ ಬಸ್ ದರ ಅಥವಾ ಎರಡನೇ ದರ್ಜೆಯ ರೈಲು ದರವನ್ನು ಮಹಾಮಂಡಳದಿಂದ ಭರಿಸಲಾಗುವುದು. ರಾಜ್ಯ ಮಟ್ಟದ ಚರ್ಚಾ ಸ್ಪರ್ದೆಯಲ್ಲಿ ಭಾಗವಹಿಸಿ ವಿಜೇತರಾದ ಮೂರು ವಿದ್ಯಾರ್ಥಿಗಳಿಗೆ ಸೂಕ್ತ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುವುದು. ಸದರಿ ಚರ್ಚಾ ಸ್ಪರ್ದೆಯಲ್ಲಿ ಭಾಗವಹಿಸಲು ವಿದ್ಯಾರ್ಥಿಗಳು ಕಾಲೇಜಿನಲ್ಲಿ ಓದುತ್ತಿರುವ ಬಗ್ಗೆ ಕಾಲೇಜಿನ ಪ್ರಾಂಶುಪಾಲರಿಂದ ಅಧಿಕೃತ ಪತ್ರ ಪಡೆದುಕೊಂಡಿರಬೇಕು. ಪ್ರತಿ ಕಾಲೇಜಿನಿಂದ ಇಬ್ಬರು

ಅಭ್ಯರ್ಥಿಗಳನ್ನು ಆಯ್ಕೆ ಮಾಡಿ (ಒಬ್ಬರು ವಿಷಯದ ಪರವಾಗಿ, ಇನ್ನೊಬ್ಬರು ವಿಷಯದ ವಿರೋಧವಾಗಿ) ಮಾತನಾಡಲು ಅಭ್ಯರ್ಥಿಗಳ ಪೂರ್ಣ ವಿಳಾಸ ಹಾಗೂ ದೂರವಾಣಿ ಸಂಖ್ಯೆಯೊಂದಿಗೆ ಉತ್ತರ ಕನ್ನಡ ಜಿಲ್ಲಾ ಸಹಕಾರ ಯೂನಿಯನ್ ನಿ., ಕುಮಟಾ. ಕೆ.ಡಿ.ಸಿ.ಸಿ. ಬ್ಯಾಂಕ್ ಬಿಲ್ಡಿಂಗ್ ಕುಮಟಾ. ಈ ಕಾರ್ಯಾಲಯಕ್ಕೆ ದಿನಾಂಕ: 07-09-2026 ರೊಳಗೆ ಕಳುಹಿಸಿಕೊಡುವ ವ್ಯವಸ್ಥೆ ಮಾಡಬೇಕು. ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ 5 ನಿಮಿಷ ಮಾತ್ರ ಚರ್ಚಾ ಸ್ಪರ್ಧೆಯಲ್ಲಿ ಮಾತನಾಡಬಹುದು.
ಕಾರಣ ತಾವು ತಮ್ಮ ಪದವಿ ಪೂರ್ವ ಕಾಲೇಜಿನ ಇಬ್ಬರು ಅಭ್ಯರ್ಥಿಗಳನ್ನು ಸದರಿ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸಲು ಕಳುಹಿಸಿಕೊಡಲು ಕೋರಲಾಗಿದೆ. ಹಾಗೂ ಭಾಗವಹಿಸುವ ವಿದ್ಯಾರ್ಥಿಗಳಿಗೆ ಉಪಹಾರ ವ್ಯವಸ್ಥೆ ಮಾಡಲಾಗುವುದು.

ಸೂಚನೆ: ಉತ್ತರ ಕನ್ನಡ ಜಿಲ್ಲಾ ಸಹಕಾರ ಯೂನಿಯನ್ ವತಿಯಿಂದ ಏರ್ಪಡಿಸುವ ಜಿಲ್ಲಾ ಮಟ್ಟದ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸಲು ಜಿಲ್ಲೆಯ ಎಲ್ಲಾ ಪ್ರಾಂಶುಪಾಲರು ಕಡ್ಡಾಯವಾಗಿ ತಮ್ಮ ಕಾಲೇಜಿನಿಂದ ಇಬ್ಬರು ವಿದ್ಯಾರ್ಥಿಗಳನ್ನು ಕಳುಹಿಸಿ ಇಲಾಖೆಗೆ ವರದಿ ಸಲ್ಲಿಸಲು ಸೂಚಿಸಿದೆ ಹೆಚ್ಚಿನ ಮಾಹಿತಿಗಾಗಿ ಇವರನ್ನು ಸಂಪರ್ಕಿಸಿ.

ಶ್ರೀ ಗೋಪಾಲ ನಾಯಕ ಮುಖ್ಯ ಕಾರ್ಯಾನಿರ್ವಾಹಣಾಧಿಕಾರಿ- 9110684178
ಶ್ರೀ ದರ್ಶನ್ ಬಿ. ಗಾಂವಕರ್ ವ್ಯವಸ್ಥಾಪಕರು - 9148375475

ಸಹಕಾರ ವಿಷಯದ ಕುರಿತು ಈ ಕೆಳಗಿನ ಜಾಲ ತಾಣಗಳನ್ನು ಸಂಪರ್ಕಿಸಬಹುದು.

1. ಕೇಂದ್ರ ಸಹಕಾರ ಸಚಿವಾಲಯದ ಜಾಲ ತಾಣ.
2. ಕರ್ನಾಟಕ ಸರ್ಕಾರದ ಸಹಕಾರ ಸಿಂಧು ಜಾಲ ತಾಣ.
3. ಎನ್.ಸಿ.ಯು.ಐ

Gopal
ಗೋಪಾಲ ನಾಯಕ
ಮುಖ್ಯ ಕಾರ್ಯಾನಿರ್ವಾಹಣಾಧಿಕಾರಿ

25/8/26
ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
ಉತ್ತರ ಕನ್ನಡ ಜಿಲ್ಲೆ ಕಾರವಾರ.